ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಸಂಪಿಗೆ ರಸ್ತೆ, 6ನೇ ಕ್ರಾಸ್,ಮಲ್ಲೇಶ್ವರಂ, ಬೆಂಗಳೂರು-03.

ಸಂಖ್ಯೆ:KSEAB/DPIE/B7(OTR)/10/2023193/19340 ದಿನಾಂಕ:03/11/2023

## -:ದರಪಟ್ಟಿ ಆಹ್ವಾನ ಪತ್ರ:-

ವಿಷಯ:ಮಂಡಲಿಯ ಇತರೆ ಪರೀಕ್ಷೆಗಳು ವಿಭಾಗದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನಡೆಸಲಾಗುವ ಗೌಪ್ಯ ಕಾರ್ಯಕ್ಕೆ ಹಾಜರಾಗುವ ಶಿಕ್ಷಕ/ಸಂಪನ್ಮೂಲ ವ್ಯಕ್ತಿಗಳಿಗೆ ಕಾಫಿ/ಟೀ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ದರಪಟ್ಟಿ ಆಹ್ವಾನಿಸುತ್ತಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತರೆ ಪರೀಕ್ಷೆಗಳು ವಿಭಾಗದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ ನಡೆಸಲಾಗುವ ಗೌಪ್ಯ ಕಾರ್ಯಕ್ಕೆ ಹಾಜರಾಗುವ ಶಿಕ್ಷಕ/ಸಂಪನ್ಮೂಲ ವ್ಯಕ್ತಿಗಳಿಗೆ ಕಾಫಿ/ಟೀ,ಊಟ ಹಾಗೂ ಕುಡಿಯುವ ನೀರು ವ್ಯವಸ್ಥೆ ಮಾಡುವ ಕಾರ್ಯಕ್ಕೆ ಈ ಕೆಳಕಂಡ ನಿಬಂಧನೆಗೊಳಪಟ್ಟು ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ವಿವರ | ದರ ರೂಪಾಯಿಗಳಲ್ಲಿ(ಎಲ್ಲಾ ತೆರಿಗೆಗಳನ್ನು ಸೇರಿ ಒಂದು ಊಟಕ್ಕೆ ಮತ್ತು ಕಾಫಿ/ಟೀ ತಗುಲುವ ವೆಚ್ಚ) |
|---|---|---|
| 01 | ಚಪಾತಿ-1, ಪಲ್ಯ/ಚಟ್ನಿ, ಬಿಸಿಬೇಳೆಬಾತ್/ವೆಜಿಟೇಬಲ್ ಪಲಾವ್/ವಾಂಗೀಬಾತ್, ಅನ್ನ ಸಾಂಬರ್, ರಸಂ, ಸ್ವೀಟ್-1, ವಡೆ/ಬಜ್ಜಿ-1, ಮೊಸರು/ಮಜ್ಜಿಗೆ, ಹಪ್ಪಳ, ಉಪ್ಪಿನಕಾಯಿ, ಕುಡಿಯುವ ನೀರು. | |
| 02 | ಚಹಾ ಮತ್ತು ಕಾಫಿ | |

ಷರತ್ತುಗಳು.

1. ಉತ್ತಮ ಗುಣಮಟ್ಟದ ಶುಚಿ ಮತ್ತು ರುಚಿಕರವಾದ ಊಟ ತಿಂಡಿಗಳನ್ನು ನೀಡತಕ್ಕದ್ದು. ಆಹಾರದಲ್ಲಿ ಅಡುಗೆ ಸೋಡಾವನ್ನು ಉಪಯೋಗಿಸತಕ್ಕದ್ದಲ್ಲ.
2. ಶುದ್ಧ ಕುಡಿಯುವ ನೀರನ್ನು ಒದಗಿಸುವುದು.
3. ಊಟ ಮತ್ತು ಕಾಫಿ/ಟೀ ಗೆ ಸಂಬಂಧಿಸಿದಂತೆ ಅಗತ್ಯವಿರುವ ತಟ್ಟೆಗಳು ಪ್ಲೇಟ್ ಗಳು, ಲೋಟಗಳು ಇತ್ಯಾದಿಗಳನ್ನು ಒದಗಿಸಬೇಕು.
4. ಪ್ಲಾಸ್ಟಿಕ್ ವಸ್ತುಗಳನ್ನು ಸರಬರಾಜು/ಬಳಸುವಂತಿಲ್ಲ.
5. ಊಟ/ಉಪಹಾರ ವಿತರಿಸುವಾಗ ವಿತರಣೆಗೆ ಅನುಕೂಲವಾಗುವಂತೆ ಆಹಾರ ಪದಾರ್ಥಗಳನ್ನು ಟೇಬಲ್ಗಳ ಮೇಲೆ ಅಚ್ಚುಕಟ್ಟಾಗಿ ಜೋಡಿಸಿಡುವುದು ಶಿಕ್ಷಕರ/ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಕೌಂಟರ್ ಗಳನ್ನು ಮಾಡಿ ವಿತರಿಸುವುದು.
6. ಕನಿಷ್ಠ ಊಟದ ಸರಬರಾಜು ಮಿತಿ 1 ಇದ್ದರೂ ಸಹ ಕಡ್ಡಾಯವಾಗಿ ಸ್ಟೀಲ್ ಪಾತ್ರೆಯ ಸಾಮಗ್ರಿಗಳನ್ನು ಬಳಸುವುದು.
7. ಕಛೇರಿಯ ಅಧಿಕಾರಿ ಮತ್ತು ನೌಕರರಲ್ಲಿ ಸೌಹಾರ್ದಯುತವಾಗಿ ವರ್ತಿಸತಕ್ಕದ್ದು.
8. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಯನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ನಿರ್ದೇಶಕರು(ಪರೀಕ್ಷೆಗಳು) ರವರದ್ದಾಗಿರುತ್ತದೆ.
9. ದರಪಟ್ಟಿ ಸಲ್ಲಿಸುವ ಸಂಸ್ಥೆಗಳು ನಿಯಮಾನುಸಾರ ಜಿ.ಎಸ್.ಟಿ ನೋಂದಣಿಯಾಗಿರಬೇಕು. ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು.
10. ಈ ಕಾರ್ಯದ ಸಂಬಂಧ ಯಾವುದೇ ಸಾಗಾಣಿಕೆ ವೆಚ್ಚವನ್ನು ಮಂಡಲಿವತಿಯಿಂದ ಪಾವತಿಸಲಾಗುವುದಿಲ್ಲ, ಹಾಗೂ ನಮೂದಿಸಿರುವ ದರ ಎಲ್ಲಾ ತೆರಿಗೆಗಳನ್ನು ಒಳಗೊಂಡಿರಬೇಕು.

11. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ ನಿಯಮಾನುಸಾರ ಟಿ.ಡಿ.ಎಸ್,ಜಿ.ಎಸ್.ಟಿ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.
12. ಊಟ, ಕಾಫಿ/ಟೀ ಮತ್ತು ಕುಡಿಯುವ ನೀರಿನ ಸರಬರಾಜಿಗೆ ಸಂಬಂಧಿಸಿದ ಕರಾರು ಒಪ್ಪಂದವು 06 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ. ಅಗತ್ಯಕ್ಕೆ ಅನುಗುಣವಾಗಿ ಕಾರ್ಯಾದೇಶ ನೀಡಲಾಗುವುದು.

ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ದರಪಟ್ಟಿ (ಕೊಟೇಷನ್) ಸಲ್ಲಿಸಲು ಇಚ್ಛಿಸುವವರು ದಿ:07/11/2023 ರೊಳಗೆ ಸೀಲು ಮಾಡಿದ ಲಕೋಟೆಯಲ್ಲಿ "ನಿರ್ದೇಶಕರು(ಪರೀಕ್ಷೆಗಳು), ಕ.ಶಾ.ಪ.ಮೌ.ಮಂಡಲಿ ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸುವುದು. ಹಾಗೂ ಲಕೋಟೆಯ ಮೇಲೆ ಕಡ್ಡಾಯವಾಗಿ "ಕಾಫಿ/ಟೀ ಮತ್ತು ಊಟ ವ್ಯವಸ್ಥೆ ಮಾಡಲು ದರಪಟ್ಟಿ" ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ "ಬಿ" ಶಾಖೆಯಿಂದ ಪಡೆಯಬಹುದಾಗಿದೆ.

3/11/2023

ನಿರ್ದೇಶಕರು(ಪರೀಕ್ಷೆಗಳು)

<u>ಪ್ರತಿಯನ್ನು</u>

1. ಮಂಡಲಿಯ ಸೂಚನಾ ಫಲಕಕ್ಕೆ.
2. ಕಛೇರಿ ಪ್ರತಿ.